

ಮರಿಯಮ್ಮನಹಳ್ಳಿ ನಾಗರತ್ನಮ್ಮ ಅವರ ಜೊತೆಗೆ ಸಂದರ್ಶಕಿ ಲಲಿತಾ ಕೆ. ಹೊಸಪ್ಯಾಟಿ

◆ **ಗ್ರಾಮೀಣ ವೃತ್ತಿರಂಗ ಭೂಮಿಯ ಕಲಾವಿದೆಯಾಗಿ ಸೇವೆ ಪ್ರಾರಂಭಿಸಿದ ತಾವು ರಂಗಭೂಮಿಯಲ್ಲಿ ಸಲ್ಲಿಸಿದ ಸೇವೆಗಾಗಿಯೇ ಅನೇಕ ಗೌರವ ಪ್ರಶಸ್ತಿ ಬಹುಮಾನಗಳಿಗೆ ಭಾಜನರಾದಿರಿ. ಈಗ 'ಗುಬ್ಬಿ ವೀರಣ್ಣ' ಪ್ರಶಸ್ತಿಗೆ ಆಯ್ಕೆಯಾಗಿದ್ದೀರಿ. ಅಭಿನಂದಿಸುತ್ತಾ ಪ್ರಶಸ್ತಿಗಳ ಕುರಿತು ಏನು ಹೇಳುವಿರಿ?**

ಕಲಾವಿದರಿಗೆ, ಬರಹಗಾರರಿಗೆ ಪ್ರಶಸ್ತಿಗಳು ಪ್ರೋತ್ಸಾಹಿಸುತ್ತವೆ. ಪ್ರಶಸ್ತಿಗಳು ನಮ್ಮನ್ನು ನಾವು ಅರಿಯಲು ಸಹಾಯಕ ಮತ್ತು ಜವಾಬ್ದಾರಿಯನ್ನೂ ಹೆಚ್ಚಿಸುತ್ತವೆ. ಸರ್ಕಾರವಾಗಲಿ, ಆಯೋಜಕರಾಗಲಿ, ಅಕಾಡೆಮಿಗಳಾಗಲಿ ಕೊಡಮಾಡುವ ಪ್ರಶಸ್ತಿಗಳಿಗೆ, ಸಮಾಜದ ಹಿರಿಯರು, ಮಠಮಾನ್ಯಗಳೂ, ಸಂಘ ಸಂಸ್ಥೆಗಳು ಕೊಡುವ ಪ್ರಶಸ್ತಿಗಳಿಗೆ ಘನತೆಯ ಮೌಲ್ಯವಿರುತ್ತದೆ. ವೈಯಕ್ತಿಕ ಘನತೆಯೂ ವೃದ್ಧಿಸುತ್ತದೆ. ಸಾಧಾರಣ ಬಡ ಕುಟುಂಬದ ಹೆಣ್ಣು ಮಗಳಾದ ನಾನು, ಕರ್ನಾಟಕ ರಾಜ್ಯೋತ್ಸವ, ಕರ್ನಾಟಕ ನಾಟಕ ಅಕಾಡೆಮಿ, ಸಾವಿತ್ರಮ್ಮ ದೇಜಗೌ, ನಾಡಚೇತನ, ಭಾರ್ಗವ, ಸೊಂಡೂರು ಮಠದ ಬಸವ ಬೆಳಗು ಪ್ರಶಸ್ತಿ, ವಿಶ್ವೇಶ್ವರಯ್ಯ ಪ್ರಶಸ್ತಿ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನಳಾದೆ. ನಾಡೋಜ ಹಾಗೂ ಡಾಕ್ಟರೇಟ್ ಎರಡೂ ಗೌರವಕ್ಕೆ ಪಾತ್ರರಾಗಿರುವ ಗಾನಕೋಗಿಲೆ ಸುಭದ್ರಮ್ಮ ಮನ್ಸೂರರ ನಂತರ ಡಾಕ್ಟರೇಟ್ ಗೌರವ ಪಡೆದ ಮತ್ತೊಬ್ಬ ಗ್ರಾಮೀಣ ರಂಗಭೂಮಿ ನಟಿ ನಾನಾದೆ. ಸರ್ಕಾರ ಕೊಡಮಾಡಿದ ಪ್ರಥಮ ವಾಲ್ಮೀಕಿ ಪ್ರಶಸ್ತಿ ಪಡೆದ ಗ್ರಾಮೀಣ ವೃತ್ತಿರಂಗಭೂಮಿ ನಟಿಯೂ ಎನಿಸಿದೆ. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ದೊರೆಯಿತು. ಗುಲಬರ್ಗಾ ವಿಶ್ವದ್ಯಾಲಯವು ಗವೀಶ ಹಿರೇಮಠ ಅವರು ಸಂಕ್ಷಿಪ್ತಗೊಳಿಸಿದ 'ರಂಗಸಿರಿ' ಕೃತಿಯನ್ನು ಎಂ.ಎ. ಮೂರನೇ ಸೆಮಿಸ್ಟರ್‌ಗೆ ಮೂರು ವರ್ಷ ಪಠ್ಯ ಮಾಡಿತ್ತು. ಈಗ ಸರ್ಕಾರದಿಂದ 'ಗುಬ್ಬಿ ವೀರಣ್ಣ' ಪ್ರಶಸ್ತಿಗೆ ಆಯ್ಕೆಯಾದ ವಿಷಯ ತಿಳಿದು ಸಹಜವಾಗಿಯೇ ಖುಷಿಯಾಗಿದೆ.

ನಾನೇ ರಂಗಭೂಮಿಗೆ ಕಡಿಮೆ ಮಾಡಿದೆ. ರಂಗಭೂಮಿಯಿಂದ ಪಡೆದದ್ದು ಸಾಗರದಷ್ಟು. ಆ ತಾಯಿ ಸೇವೆ ಪುಕ್ಕಟೆ ಮಾಡಿಸಿಕೊಂಡಿಲ್ಲ. ಮೊದಲು ಫ್ರೀ ಆಗಿಯೂ ದುಡಿದೆ. ಈಗ ಅಮ್ಮ ಕೊಡುತ್ತಿದ್ದಾಳೆ. ಕೈ ಬಿಟ್ಟಿಲ್ಲ. ಉಸಿರಿರುವವರೆಗೂ ಈ ಜೀವ ರಂಗಭೂಮಿಗಾಗಿಯೇ ಇರುತ್ತದೆ.

●